# ಕರ್ನಾಟಕ ಸರ್ಕಾರ

ಸಂಖ್ಯೆ/ಆಪಸಂ/ಸಿಬ್ಬಂದಿ-ಸಿ(1):ಇ-64:2021

ಆಯುಕ್ತರ ಕಾರ್ಯಾಲಯ,
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ,
ಬೆಂಗಳೂರು, ದಿನಾಂಕ: 16-08-2021

## ಸುತ್ತೋಲೆ

ವಿಷಯ :- ಮೇ-2018ರ ಆದೇಶದಲ್ಲಿ ನೀಡಲಾದ ಮುಂಬಡ್ತಿಯಲ್ಲಿನ ಲೋಪಗಳನ್ನು ಸರಿಪಡಿಸಿ ಮುಂಬಡ್ತಿ ಆದೇಶಗಳನ್ನು ಜಾರಿಗೊಳಿಸುವ ಬಗ್ಗೆ

ಉಲ್ಲೇಖ :- ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿನಾಂಕ:10-02-2021ರ ಆದೇಶ

****

ಉಲ್ಲೇಖಿತ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿನಾಂಕ:10-02-2021ರ ಆದೇಶದಂತೆ ಮೇ-2018ರಲ್ಲಿ ನೀಡಲಾದ ಮುಂಬಡ್ತಿಯಲ್ಲಿನ ಲೋಪಗಳನ್ನು ಸರಿಪಡಿಸಿ, ಎಲ್ಲಾ ಮುಂಬಡ್ತಿ ಆದೇಶಗಳನ್ನು ಸಕ್ರಮಗೊಳಿಸಿ ಜಾರಿಗೊಳಿಸುವಂತೆ ಸೂಚಿಸಿರುವುದರಿಂದ, ಸರ್ಕಾರದಿಂದ ಒಬ್ಬರು ಪ್ರತಿನಿಧಿಯನ್ನು ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಒಬ್ಬರು ಪ್ರತಿನಿಧಿಯನ್ನು ಅಹ್ವಾನಿಸಿ ದಿನಾಂಕ:21-04-2021ರ ಅಪರಾಹ್ನ 3.30ಕ್ಕೆ ಇಲಾಖಾ ಮುಂಬಡ್ತಿ ಸಮಿತಿ ಸಭೆಯನ್ನು ನಡೆಸಲಾಗಿರುತ್ತದೆ.

ಸದರಿ ಸಭೆಯಲ್ಲಿ ಚರ್ಚಿಸಿ ತಿರ್ಮಾನಿಸಿದಂತೆ ಮುಂಬಡ್ತಿಯಲ್ಲಿ ಅಗಿರುವ ಲೋಪಗಳನ್ನು ಸರಿಪಡಿಸಿ ಈ ಮುಂಬಡ್ತಿ ಆದೇಶಗಳನ್ನು ಸಕ್ರಮಗೊಳಿಸಿ ಜಾರಿಗೊಳಿಸಲು ಕ್ರಮಕ್ಕೆಗೊಳ್ಳಲಾಗಿರುತ್ತದೆ. ಆದ್ದರಿಂದ ದಿನಾಂಕ:21-04-2021ರ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳನ್ನು ಇಲಾಖಾ ಮಾಹಿತಿ ಜಾಲತಣಾ(www.ahvs.kar.nic.in)ದಲ್ಲಿ ದಿ:16-08-2021 ರಂದು ಪ್ರಕಟಿಸಲಾಗಿದೆ ಈ ಬಗ್ಗೆ ಪರಿಶೀಲಿಸಿ ಸಂಬಂಧಪಟ್ಟ ಎಲ್ಲಾ ನೌಕರರು ಅವರ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಕೇಂದ್ರ ಕಛೇರಿಗೆ ದಿ:25-08-2021ರ ಒಳಗಾಗಿ ಸಲ್ಲಿಸುವುದು. ಇಲ್ಲವಾದಲ್ಲಿ ನಿಮ್ಮ ಆಕ್ಷೇಪಣೆಗಳು ಏನು ಇಲ್ಲವೆಂದು ಭಾವಿಸಿ, ಸದರಿ ಮುಂಬಡ್ತಿ ಆದೇಶಗಳನ್ನು (ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಜಾನುವಾರು ಅಧಿಕಾರಿ ಹುದ್ದೆಗೆ ಮತ್ತು ಜಾನುವಾರು ಅಧಿಕಾರಿಯಿಂದ ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಗೆ) ಸಕ್ರಮಗೊಳಿಸಿ ಆದೇಶವನ್ನು ಜಾರಿಗೊಳಿಸಲಾಗುವುದು.

**(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

16/08

**ಜಂಟಿ ನಿರ್ದೇಶಕರು(ಆಡಳಿತ)**

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:-**

1. ಜಂಟಿ ನಿರ್ದೇಶಕರು(ರಾಜ್ಯ ವಲಯ), ಹೆಸರಘಟ್ಟ ಬೆಂಗಳೂರು /ಮೈಸೂರು / ಧಾರವಾಡ ಹಾಗೂ ರಾಯಚೂರು.
2. 30 ಜಿಲ್ಲೆ ಉಪನಿರ್ದೇಶಕರು, ಆಡಳಿತ / ಪಾಲಿಕ್ಲಿನಿಕ್ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
3. ಎಲ್ಲಾ ಕ್ಷೇತ್ರಾಧಿಕಾರಿಗಳು ಜಾನುವಾರು ಸಂವರ್ಧನಾ ಕ್ಷೇತ್ರ/ ಕುಕ್ಕುಟ ಕ್ಷೇತ್ರಗಳು
4. ಉಪನಿರ್ದೇಶಕರು, ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ ತುಮಕೂರು/ ಹಾಸನ/ ಕಲಬುರಗಿ / ಧಾರವಾಡ.
5. ಸಹಾಯಕ ನಿರ್ದೇಶಕರು, ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರ ದಾವಣಗೆರೆ/ಬಳ್ಳಾರಿ/ ಬೆಳಗಾವಿ.
6. ಸಂಬಂಧಪಟ್ಟ ಎಲ್ಲಾ ನೌಕರರುಗಳಿಗೆ ತಿಳಿಯಪಡಿಸುವುದೇನೆಂದರೆ ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗಿದ್ದು ಮಾಹಿತಿ ಪಡೆಯಲು ಸೂಚಿಸಿದೆ.
7. ಕಛೇರಿ ಪ್ರತಿ

Hema/ General letter 3(1)

**ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಾನುವಾರು ಅಧಿಕಾರಿ ಹುದ್ದೆಯಿಂದ ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಮೇ-2018ರ ಮಾಹೆಯಲ್ಲಿ ನೀಡಲಾದ ಮುಂಬಡ್ತಿಯ ಆದೇಶದ ನ್ಯೂನ್ಯತೆಗಳನ್ನು ಸರಿಪಡಿಸುವಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಸೂಚಿಸಿರುವುದರಿಂದ ಆಯುಕ್ತರು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ:21-04-2021ರಂದು ಅಪರಾಹ್ನ 3:30ಕ್ಕೆ ಪಶುಪಾಲನಾ ಭವನದ ಸಭಾಂಗಣದಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು,**

ಸಭೆಯಲ್ಲಿ ಹಾಜರಿದ್ದ ಇಲಾಖಾ ಮುಂಬಡ್ತಿ ಸಮಿತಿಯ ಎಲ್ಲಾ ಸದಸ್ಯರನ್ನು ಮಾನ್ಯ ಜಂಟಿ ನಿರ್ದೇಶಕರು(ಆಡಳಿತ) ರವರು ಸಭೆಗೆ ಸ್ವಾಗತಿಸುತ್ತಾ ಸದರಿ ವೃಂದದ ಮುಂಬಡ್ತಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಭೆಯಲ್ಲಿ ಮಂಡಿಸಿದರು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮದನ್ವಯ ಜಾನುವಾರು ಅಭಿವೃದ್ಧಿ ಅಧಿಕಾರಿಯ 227 ಹುದ್ದೆಗಳು ಹೊಸದಾಗಿ ಮಂಜೂರಾತಿದ್ದು. ಸದರಿ ಹುದ್ದೆಗಳು ಶೇಕಡ% 100 ರಷ್ಟು ಮುಂಬಡ್ತಿ ಹುದ್ದೆಯಾಗಿರುತ್ತದೆ.

ದಿನಾಂಕ:16-5-2018 ರಂದು ಖಾಲಿ ಇದ್ದ 227 ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮದಂತೆ ಕನಿಷ್ಠ ಸೇವಾವಧಿ ಪೂರ್ಣಗೊಳಿಸಿದ 171 ಜಾನುವಾರು ಅಧಿಕಾರಿಗಳಿಗೆ ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಮಂಬಡ್ತಿ ನೀಡಲು ಮಂಬಡ್ತಿ ಸಭೆಯಲ್ಲಿ ಪರಿಗಣಿಸಿ ಈ ಕಛೇರಿ ಆದೇಶ ಸಂಖ್ಯೆ:ಆಪಸಂ/ಸಿಬ್ಬಂದಿ-3(1)/ವಿವ-10: 2017-18 ದಿನಾಂಕ:16-05-2018ರ ಆದೇಶದಲ್ಲಿ 171 ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಮುಂಬಡ್ತಿ ನೀಡಿ ಆದೇಶ ಹೊರಡಿಸಲಾಗಿತ್ತು. ಈ ಆದೇಶವನ್ನು ಸರ್ಕಾರವು ದಿ:13-03-2019 ರ ಆದೇಶದಂತೆ ರದ್ದುಪಡಿಸಿತ್ತು,

ಸರ್ಕಾರದ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಕೆಲವು ನೌಕರರು ದಾವೆ ಹೊಡಿದ್ದು, ಸದರಿ ಪ್ರಕರಣದ ಕುರಿತು ಮಾನ್ಯ ನ್ಯಾಯಲಾಯವು ದಿನಾಂಕ:10-02-2021ರಂದು ಅಂತಿಮ ತೀರ್ಪು ಬಂದಿರುತ್ತದೆ. ಸದರಿ ತೀರ್ಪಿನಲ್ಲಿ ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಸಂಬಂಧಿಸಿದಂತೆ ಯಾವುದೇ ನ್ಯೂನ್ಯತೆಗಳ ಬಗ್ಗೆ ಪ್ರಸ್ತಾಪವಿರುವುದಿಲ್ಲ ಆದರೆ ಒಟ್ಟಾರೆ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ತೀರ್ಪಿನಲ್ಲಿ ರೋಸ್ಟರ್ ಬಿಂದು ಅಳವಡಿಸಿರುವುದನ್ನು ಪುನರ್ ಪರಿಶೀಲಿಸಲು ಮತ್ತು ಮುಂಬಡ್ತಿಗಳನ್ನು ಇಲಾಖಾ ಮುಂಬಡ್ತಿ ಸಮಿತಿಯ ಮುಂದೆ ಮಂಡಿಸಿ ಮುಂಬಡ್ತಿ ನೀಡುವ ಬಗ್ಗೆ ಸೂಚಿಸಲಾಗಿರುತ್ತದೆ.

ಕರ್ನಾಟಕ ಆಡಳಿತ ನ್ಯಾಯಮಂಡಳಿಯ ತೀರ್ಪಿನನುಸಾರ 2018 ರಲ್ಲಿ ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಮುಂಬಡ್ತಿ ನೀಡಿರುವುದನ್ನು ಪುನರ್ ಪರಿಶೀಲಿಸಿ ರೋಸ್ಟರ್ ಬಿಂದು (33 ವೃತ್ತ)ವನ್ನು ಅಳವಡಿಸಿ ಪಟ್ಟಿಯನ್ನು ಸಿದ್ಧಪಡಿಸಲಾಗಿರುತ್ತದೆ. ರೋಸ್ಟರ್ ಬಿಂದು 1 ರಿಂದ ಪ್ರಾರಂಭವಾಗಿರುತ್ತದೆ ಹಾಗೂ ಕಲ್ಯಾಣ-ಕರ್ನಾಟಕ 371(ಜೆ)ರಲ್ಲಿ ಮುಂಬಡ್ತಿ ನೀಡುವಾಗ ಈ ಹಿಂದೆ ರೋಸ್ಟರ ಬಿಂದು 1 ರಿಂದ ಪ್ರಾರಂಭಿಸಲಾಗಿದೆ. ಮುಂದುವರೆದಂತೆ ಸರ್ಕಾರವು ಆದೇಶ ಸಂಖ್ಯೆ ಇ-17 ಪಅವಿ 2019 ದಿನಾಂಕ 05-06-2020 ರಲ್ಲಿ ಇಲಾಖಾ ಮುಂಬಡ್ತಿ ಸಮಿತಿಯನ್ನು ರಚಿಸಿದ್ದು ಈ ಸಮಿತಿಯಲ್ಲಿ ಮಾನ್ಯ ಆಯುಕ್ತರು, ಪಶುಪಾಲನಾ ಇಲಾಖೆ, ಇವರು ಇಲಾಖಾ ಮುಂಬಡ್ತಿ ಸಮಿತಿಯ ಅಧ್ಯಕ್ಷರಾಗಿದ್ದು ಮಾನ್ಯ ನಿರ್ದೇಶಕರು, ಜಂಟಿ ನಿರ್ದೇಶಕರು(ಆಡಳಿತ) ರವರು ಸದಸ್ಯರಾಗಿದ್ದು, ಮತ್ತು ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಪೀಠಾಧಿಕಾರಿ-2, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಇವರು ಸಹಾ ಸದಸ್ಯರಾಗಿದ್ದು, ಇಲಾಖೆಯ ಕೇಂದ್ರ ಸ್ಥಾನಿಕ ಸಹಾಯಕರು ಸದಸ್ಯ ಕಾರ್ಯದರ್ಶಿಯಾಗಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಗಿದ್ದು ಮತ್ತು ಈ ಸಭೆಗೆ ಇಲಾಖಾ ಮುಂಬಡ್ತಿ ಸಮಿತಿ ಎಲ್ಲಾ ಸದಸ್ಯರು ಹಾಜರಿರುತ್ತಾರೆ.